ಗುತ್ತಿಗೆ ಆಧಾರದ ಮೇಲೆ ಸೇವೆ ಸಲ್ಲಿಸುತ್ತಿರುವ ವೈದ್ಯರುಗಳನ್ನು ಖಾಯಂಗೊಳಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1061(1059)

ಪ್ರಶ್ನಿಸಿದ ಸದಸ್ಯರ ಹೆಸರು: ಶ್ರೀ ಆತ್ಮಾನಂದ ಎಂ.ಎಸ್(ಮಂಡ್ಯ)

ಉತ್ತರಿಸಬೇಕಾದ ಸಚಿವರು: ಡಾ॥ಎ.ಬಿ.ಮಾಲಕರೆಡ್ಡಿ(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಪ್ರಶ್ನೆ

ಅ) ರಾಜ್ಯದಲ್ಲಿನ ಪ್ರಾಥಮಿಕ ಆರೋಗ್ಯ ಕೇಂದ್ರ ಮತ್ತು ಘಟಕಗಳಲ್ಲಿ ಸೇವೆ ಸಲ್ಲಿಸಲು ಗುತ್ತಿಗೆ ಆಧಾರದ ಮೇಲೆ ವೈದ್ಯರನ್ನು ನೇಮಿಸಕೊಳ್ಳಲಾಗಿದೆಯೇ?

ಆ) ಹಾಗಿದ್ದಲ್ಲಿ ಇದರ ವಿವರಗಳೇನು?

ಇ) ಈವರೆಗೆ ಇದರಲ್ಲಿ ಖಾಯಂಗೊಳಿಸಲಾಗಿರುವ ವೈದ್ಯರ ಸಂಖ್ಯೆ ಎಷ್ಟು?

ಈ) ಹಾಗೂ ಈವರೆಗೆ ಖಾಯಂಗೊಳಿಸದೇ ಇರುವ ವೈದ್ಯರ ಸಂಖ್ಯೆ ಎಷ್ಟು?

ಉ) ಖಾಯಂಗೊಳಿಸದೇ ಇರುವ ವೈದ್ಯರನ್ನು ಯಾವಾಗ ಖಾಯಂಗೊಳಿಸಲಾಗುವುದು?

ಉತ್ತರ

ಅ) ಹೌದು.

ಆ) 1992-93ನೇ ಸಾಲಿನಿಂದ ಜನವರಿ 2002ರ ವರೆಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯಲ್ಲಿ 3712 ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ.

ಇ) ಈವರೆಗೆ 318 ಗುತ್ತಿಗೆ ಆಧಾರದ ವೈದ್ಯರ ಸೇವೆಗಳನ್ನು ಖಾಯಂಗೊಳಿಸಲಾಗಿದೆ.

ಈ) 995 ಗುತ್ತಿಗೆ ವೈದ್ಯಾಧಿಕಾರಿಗಳು.

ಉ) ಈ ಬಗ್ಗೆ ಇನ್ನೂ ಯಾವುದೇ ನಿರ್ಧಾರ ತೆಗೆದುಕೊಂಡಿರುವುದಿಲ್ಲ.